International Journal of Kannada Research 2018; 4(3): 198-201




International Journal of Kannada Research
www.kannadajournal.com

**ISSN: 2454–5813**
IJKR 2018; 4(3): 198-201
© 2018 IJKR
www.kannadajournal.com
Received: 03-05-2018
Accepted: 04-06-2018

**ಶ್ರೀಮತಿ ಸುನಂದಾ.ಎಮ್.ಕಾಳಾಯಿ**
ಸಂಶೋಧನಾ ವಿದ್ಯಾರ್ಥಿನಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

**ಡಾ। ಕೆ ಆರ್ ಸಿದ್ಧಗಂಗಮ್ಮ**
ಸಂಶೋಧನಾ ಮಾರ್ಗದರ್ಶಕರು, ರಾ ಚ ವಿ ಸಂಶೋಧನಾ ಕೇಂದ್ರ, ಲಿಂಗರಾಜ ಮಹಾವಿದ್ಯಾಲಯ ಬೆಳಗಾವಿ

**Correspondence**
**ಶ್ರೀಮತಿ ಸುನಂದಾ.ಎಮ್.ಕಾಳಾಯಿ**
ಸಂಶೋಧನಾ ವಿದ್ಯಾರ್ಥಿನಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

# ಬೆಳಗಾವಿ ಜಿಲ್ಲೆಯ ಶಕ್ತಿದೇವತೆ ಬಡಕುಂದ್ರಿಯ ಹೊಳೆಮ್ಮಾ –ಒಂದು ಜಾನಪದೀಯ ಅಧ್ಯಯನ

**ಶ್ರೀಮತಿ ಸುನಂದಾ.ಎಮ್.ಕಾಳಾಯಿ, ಡಾ। ಕೆ ಆರ್ ಸಿದ್ಧಗಂಗಮ್ಮ**

## ಪೀಠಿಕೆ

ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಮುಖ ಭಕ್ತಿ ತಾಣಗಳಲ್ಲಿ ಒಂದಾಗಿರುವ ಹುಕ್ಕೇರಿ ತಾಲೂಕಿನ ಬಡಕುಂದ್ರೀಯ ಹೊಳೆವ್ವ ಅಥವಾ ಲಕ್ಮೀದೇವಿಯು ಈ ಸುತ್ತಲಿನ ಪರಿಸರದ ಸೌಭಾಗ್ಯ ಲಕ್ಮೀ. ಹುಕ್ಕೇರಿ ತಾಲೂಕಿನ ಹತ್ತರಗಿಯಿಂದ ೬ಕಿ ಮೀ ಮತ್ತು ಹುಕ್ಕೇರಿಯಿಂದ ೫ ಕಿ ಮೀ ದೂರದಲ್ಲಿರುವ ಬಡಕುಂದ್ರಿ ಗ್ರಾಮದ ಹಿರಣ್ಯಕೇಶಿ ನದಿಯ ತಟದಲ್ಲಿ ನಿಸರ್ಗ ರಮಣೀಯವಾದ ಪರಿಸರದಲ್ಲಿ ಬೃಹದಾಕಾರದ ಹಸಿರು ಹುಣಸೆ ಮರಗಳ ಬನದ ಸಿರಿಯಲ್ಲಿ ಹಸಿರು ಸೀರೆ, ಹಸಿರು ಬಳೆತೊಟ್ಟು ದರ್ಶನಕ್ಕೆ ಬರುವ ಭಕ್ತರಿಗೆ ಹಸಿರು ಹಸಿರಾಗಿ ಕಂಗೋಳಿಸುವ ಶಕ್ತಿ ದೇವತೆ. ಹೊಳೆಮ್ಮಾ ಮಂದಿರದ ಇತಿಹಾಸ ಸುಮಾರು ೬೦೦ ವರ್ಷಗಳ ಹಿಂದಿನದು. ಈ ದೇವಿಯು ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿ ಲಕ್ಷಾಂತರ ಭಕ್ತಾಧಿಗಳನ್ನು ಹೊಂದಿರುವ ದೇವಿಯ ಮಹಿಮೆ ಮತ್ತು ಪ್ರತೀಷ್ಠೆ ವರ್ಣಾನಾತೀತವಾದುದು, ಹಿಂದು, ಮುಸ್ಲಿಂ, ಜೈನ, ಲಿಂಗಾಯತ ಹೀಗೆ ಸಮಾಜದ ಎಲ್ಲ ಧರ್ಮಗಳ ಮತ್ತು ಜಾತಿಯ ಭಕ್ತರನ್ನು ಹೊಂದಿದ್ದು ಇದು ಸರ್ವಧರ್ಮಗಳ ಭಾವೈಕ್ಯತೆಯ ಭಕ್ತಿಯ ನೆಲೆಬೀಡಾಗಿದೆ, ಪ್ರತಿವರ್ಷ ಭಾರತ ಹುಣ್ಣಿಮೆ ಮತ್ತು ಮಹಾನವಮಿ ದಸರಾ ದಿನಗಳಂದು ವರ್ಷಕ್ಕೆ ೨ ಬಾರಿ ಈ ದೇವಿಯ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಈ ದೇವಿ ಜಾತ್ರೆಗೆ ನಾಡಿನ ಮೂಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಆಗಮಿಸಿ ದೇವಿಯ ಜಾತ್ರೆಯಲ್ಲಿ ಭಾಗವಹಿಸಿ ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ತಮ್ಮ ಮನದ ಬಯಕೆಗಳನ್ನು ಈಡೇರಿಸಿಕೊಳ್ಳುವರು.

## ಹೊಳೆಮ್ಮಾ ದೇವಿಯ ಇತಿಹಾಸ

ಕ್ರಿ ಶ ೧೬೦೦ ನೇ ಶತಮಾನದಲ್ಲಿ ಆಳಿದ ಕರ್ನಾಟಕದ ಕೊನೆಯ ರಾಜ ಮನೆತನ ಕದಂಬರ ರಾಜ್ಯ ಲಕ್ಷೀ ಈಕೆಯಂದು ಇತಿಹಾಸ ಸಾರಿ ಹೇಳುತ್ತದೆ. (ಡಾ. ಎಸ್ ಪಿ ಸುರೇಬಾನಕರ) ಮೂಲತ:ವಾಗಿ ಹೆಸರು ಲಕ್ಷೀದೇವಿ ಆದರೆ ಈಕೆಯು ಹಿರಣ್ಯಕೇಶಿ ಹೊಳೆಯ ದಡದಲ್ಲಿ ನೆಲೆಸಿರುವುದರಿಂದ ಈಕೆಗೆ ಹೊಳೆವ್ವದೇವಿ ಎಂದು ರೂಢಿಯಲ್ಲಿ ಬಂತು. ದಕ್ಷಿಣ ಮಹಾರಾಷ್ಟ್ರದ ಕೆಲವು ಭಾಗಗಳು, ಉತ್ತರ ಕರ್ನಾಟಕ ಹಾಗೂ ಗೋವಾ ರಾಜ್ಯಗಳನ್ನೊಳಗೊಂಡ ಕದಂಬ ರಾಜ್ಯವು ಮೊಘಲರ ದಾಳಿಯಿಂದ ತತ್ತರಿಸಿ ಹಾಳಾದಾಗ ಕದಂಬರ ಕೊನೆಯ ದೊರೆಯಾದ ರಾಜಶೇಖರನು ರಾಜ್ಯಬಿಟ್ಟು ತಿರ್ಥಯಾತ್ರೆಗೆ ಹೊರಟಾಗ ಅವನಿಗೆ ಪ್ರತ್ಯಕ್ಷಳಾದ ಈ ಲಕ್ಷೀ ದೇವಿಯ ತಾನು ಯಾವ ಸ್ಥಳದಲ್ಲಿ ಅದೃಶ್ಯಳಾಗುವಳೋ ಅಲ್ಲಿಯೇ ನನ್ನನ್ನು ಪ್ರತಿಷ್ಠಾಪಿಸಿ ಎಂದು ಹೇಳಿ ಮಾನವ ರೂಪದಲ್ಲಿ ಅರಸನನ್ನು ಹಿಂಬಾಲಿಸುತ್ತಾಳೆ. ರಾಜ ರಾಜಶೇಖರನು ಹಾಗೆಯೇ ಅಲೆಯುತ್ತ ಹಿರಣ್ಯಕೇಶಿ ನದಿಯ ಬಳಿ ಬಂದಾಗ ಆಗಿನ ದಟ್ಟ ಹಸಿರು ಕಾನನಿಂದ ಕೂಡಿದ್ದ ಆ ಪ್ರದೇಶದಲ್ಲಿ ನೆಲೆಸುವ ಇಚ್ಛೆಯಾಗಿ ಈ ರಾಜ್ಯ ಲಕ್ಷೀಯು " ತಾನು ಇಲ್ಲಿಯೇ ನೆಲೆಸುತ್ತೇನೆ." ಎಂದು ಹೇಳಿ ಅಲ್ಲಿಯೇ ಮಾಯವಾಗಿ ಶಿಲೆಯಾಗಿ ನಿಂತುಬಿಟ್ಟಳಂತೆ. ಈ ಲಕ್ಷೀಯ ಅಣತಿಯಂತೆ ರಾಜಶೇಖರ ದೊರೆಯು ಅವಳನ್ನು ಅಲ್ಲಿಯೇ ಪ್ರತಿಷ್ಠಾಪಿಸಿ ಅವನು ಮುನ್ನೆಡೆದನಂತೆ. ಹೀಗೆ ಕದಂಬ ರಾಜವಂಶದ ಈ ರಾಜ ಲಕ್ಷೀಯು ಈ ಪ್ರದೇಶದ ಸೌಭಾಗ್ಯ ಲಕ್ಷೀಯಾಗಿ ಹೊಳೆಮ್ಮದೇವಿಯಾಗಿ ಪ್ರತೀತಳಾಗಿದ್ದಾಳೆ. ಇದು ಐತಿಹಾಸಿಕ ಹಿನ್ನಲೆಯ ಕಥೆ. ಆದರೆ ಈ ದೇವಿಯ ಇತಿಹಾಸವನ್ನು ಸಾರುವ ಅನೇಕ ಪೌರಾಣಿಕ ಕಥೆಗಳು ರೂಢಿಯಲ್ಲಿವೆ.

**ಹೊಳೆಮ್ಮಾ ದೇವಿಯ ಇತಿಹಾಸ ಕುರಿತಾದ ಪೌರಾಣಿಕ ಮತ್ತು ಜನಪದ ಕಥೆಗಳು:**

ಹೊಳೆಮ್ಮದೇವಿ ಕುರಿತಾದ ಐತಿಹಾಸಿಕ ಹಿನ್ನಲೆಯ ಕಥೆಯಿರುವಂತೆ ಅನೇಕ ಪೌರಾಣಿಕ ಕಥೆಗಳು ರೂಢಿಯಲ್ಲಿವೆ. ಪೌರಾಣಿಕವಾಗಿ ಸವದತ್ತಿಯ ಎಲ್ಲಮ್ಮ ಮತ್ತು ಹೊಳಮ್ಮ ಅಕ್ಕತಂಗಿಯರು ಯಾವುದೋ ಒಂದು ವಿಷಯಕ್ಕೆ ಈ ಸಹೋದರಿಯರಲ್ಲಿ ಜಗಳವಾಗಿ ಅಕ್ಕನಿಂದ ಮುನಿಸಿಕೊಂಡು ಹೊಳೆಮ್ಮದೇವಿ ಅಲ್ಲಿಂದ ಹೊರಬಂದಳಂತೆ ಹಾಗೆಯೇ ಸಿಟ್ಟಿನಿಂದ ಹೊಳೆಮ್ಮ ಹೋಗುವುದನ್ನು ಕಂಡು ಎಲ್ಲಮ್ಮ ನೀನು ಹೋಗಬೇಡ ನಿಲ್ಲು ನಿಲ್ಲು ಎಂದು ತಡೆಯುತ್ತಾಳೆ. ಆಗ ಎಲ್ಲಮ್ಮ ಅವಳಿಗೆ "ನೀನು ಎಲ್ಲೇ ಹೊದರೂ ನನ್ನ ಪರಿಧಿ ದಾಟಿ ಹೋಗಲಾರೆ" ಎಂದು ಎಚ್ಚರಿಸುತ್ತಾಳೆ. ಆಗ ಹೊಳೆಮ್ಮದೇವಿ ಅಕ್ಕ ಎಲ್ಲಮ್ಮಳಿಗೆ "ನಿನ್ನನು ನೋಡಲು ಬಂದವರು ನಾನೆಲ್ಲಿದ್ದರೂ ನನ್ನನು ನೋಡಿಕೊಂಡು ಹೋಗುತ್ತಾರೆ ಬಿಡು" ಎಂದು ಮಾರ್ನುಡಿಯುತ್ತಾರೆ. ಹೀಗೆ ಮುಖ ತಿರುವಿಕೊಂಡು ನಡೆ ನಡೆಯುತ್ತ ಈ ಸ್ಥಳಕ್ಕೆ ಬಂದಾಗ ಆಕೆಯ ಕಾಲುಗಳು ಸೋತು ಮುಂದೆ ಹೋಗಲಾರದೆ ಇಲ್ಲಿಯೇ ಅಂದರೆ ಬಡಕುಂದ್ರೀಯ ಹಿರಣ್ಯಕೇಶಿ ನದಿ ದಡದಲ್ಲಿ ಅರಮನೆಯ ತಾಣದಲ್ಲಿ ನೆಲೆಯೂರುತ್ತಾಳೆ. ಹೀಗಾಗಿ ಇಂದಿಗೂ ಸವದತ್ತಿ ಎಲ್ಲಮ್ಮನಿಗೆ ಹೋದವರು ಹಿಂದಿರುಗುವಾಗ ಚಾಚು ತಪ್ಪದೇ ಇಲ್ಲಿಗೆ ಬಂದು ಹೊಳೆಮ್ಮ ದೇವಿಯ ದರ್ಶನ ಪಡೆಯುತ್ತಾರೆ. ಆಗ ಮಾತ್ರ ಅವರು ಕೈಗೊಂಡ ತೀರ್ಥಕ್ಷೇತ್ರ ಯಾತ್ರೆಯು ಸಾರ್ಥಕವಾಗುತ್ತದೆ. ಎಂಬ ವಾಡಿಕೆಯುಂಟು. ಈ ರೀತಿಯಾದ ಪೌರಾಣಿಕ ಕಥೆಯಂತೆ ದೇವಿಯ ಹಿನ್ನಲೆ ಕುರಿತಾದ ಒಂದು ಜನಪದ ಕಥೆಯು ಇದೆ.

ಪಕ್ಕದ ಮಹಾರಾಷ್ಟ್ರದ ಒಂದು ಪ್ರತಿಷ್ಟಿತ ಮನೆತನದಲ್ಲಿ ಹುಟ್ಟಿದ ಈ ಲಕ್ಷೀದೇವಿಯು ಕಾಯಕವು ಎಮ್ಮೆ ಕಾಯುವುದಾಗಿತ್ತು. ಅಪಾರ ಧನ ದಾನ್ಯಗಳಿಂದ ತುಂಬಿದ ಶ್ರೀಮಂತ ಮನೆತನದಲ್ಲಿ ಜನಿಸಿದ್ದರೂ ಹೆಣ್ಣು ಮಕ್ಕಳೆಂಬ ಕಾರಣಕ್ಕೆ ಅವಳನ್ನು ಎಮ್ಮೆ ಮೇಯಿಸಲು ಕಳುಹಿಸುತ್ತಿದ್ದರು. ಹೀಗೆ ದಿನಾಲು ಎಮ್ಮೆ ಮೇಯಿಸಲು ಹೋಗುವಾಗ ಅವಳಿಗೆ ಕೇವಲ ಊಟಕ್ಕೆ ಕಟಕರೊಟ್ಟಿ, ಖಾರದಪುಡಿ ಬುತ್ತಿಯನ್ನು ಕಟ್ಟಿಕಳುಹಿಸುತ್ತಿದ್ದರು. ಅವಳಿಗೆ ದಿನಾಲು ಊಟಕ್ಕೆ ಬೇರೆ ಏನೂ ಸಿಗದೇ ಪ್ರತಿದಿನ ಈ ಕಟಕರೊಟ್ಟಿಯ ಊಟ ತಿಂದು ತಿಂದು ಸಾಕಾಗಿ ಹೋಗಿತ್ತು. ಒಂದು ದಿನ ಅವಳು ಊಟ ಮಾಡದೇ ಗಿಡದ ಕೆಳಗೆ ಅಳುತ್ತ ಕುಳಿತಿದ್ದಳು ಆಗ ಅದೇ ದಾರಿಯಿಂದ ಹಾದು ಹೋಗುತ್ತಿದ್ದ ಒಬ್ಬ ಋಷಿಮುನಿಯು ಈ ಮಗು ಅಳುವುದನ್ನು ಕಂಡು ಮಗು ಏಕೆ ಅಳುತ್ತೀರುವೇ ಎಂದು ಕೇಳಲಾಗಿ, ಆಗ ಅವಳು ಸ್ವಾಮಿಗಳೇ ನನಗೆ ದಿನಾಲು ಈ ಕಟಕ ರೊಟ್ಟಿಯನ್ನು ತಿಂದು ಬೇಸರವಾಗಿದೆ. ಎಂದು ಹೇಳಿದಳು ಆಗ ಅವರು ಅಳಬೇಡ ಕಂದಾ ಎಂದು ಸಂತೈಸಿ ನೀನು ತಂದಿರುವ ಈ ಕಟಕರೊಟ್ಟಿಯನ್ನು ಎಮ್ಮೆಗೆ ತಿನ್ನಿಸಿ ಆ ಎಮ್ಮೆಯ ಹಾಲು ಕುಡಿ ಎಂದು ವರ ನೀಡಿ ಹೊರಟು ಹೋಗುತ್ತಾರೆ.

ಆ ದಿನದಿಂದ ಅವಳು ಮನೆಯಲ್ಲಿ ಕಟ್ಟುತ್ತಿದ್ದ ಕಟಕ ರೊಟ್ಟಿಯನ್ನು ಎಮ್ಮೆ ಗಳಿಗೆ ತಿನ್ನಸಿ ತಾನು ಆ ಎಮ್ಮೆಗಳ ಹಾಲು ಕುಡಿಯುತ್ತಿದ್ದಳು. ಅವರ ಮನೆಯವರು ಸಂಜೆ ಹಾಲು ಕರೆಯಲು ಹೋದಾಗ ದನಗಳ ಹಾಲು ಕೊಡುವುದನ್ನು ನಿಲ್ಲಿಸಿದವು. ಇದರಿಂದ ಸಂಶಯಗೊಂಡು ಅವರ ಮನೆಯವರು ದಿನಾಲು ಎಮ್ಮೆಗಳನ್ನು ಮೇಯಿಸಲು ಹೋದ ಸಮಯದಲ್ಲಿ ಏನು ನಡೆಯುತ್ತದೆ ಎಂಬುದನ್ನು ಒಂದು ದಿನ ಅವಳು ದನ ಮೇಯಿಸಲು ಹೋದ ನಂತರ ದೂರದಿಂದ ನಿಂತು ಅವಳನ್ನು ವೀಕ್ಷಿಸಿದರು. ಆಗ ಅವಲು ದಿನನಿತ್ಯದಂತೆ ತಾನು ತಂದಿರುವ ಒಣರೊಟ್ಟಿಯನ್ನು ಆ ದನಗಳಿಗೆ ತಿನ್ನಿಸಿ ಹಾಲು ಕರೆದು ಕುಡಿದಳು. ಆದಿನ ಅವಳು ಸಂಜೆ ಮನೆಗೆ ಬಂದಾಗ ಅವಳ ತಂದೆಯ ಮಗಳೆಂಬ ಕನಿಕರವಿಲ್ಲದೇ ಅವಳನ್ನು ಬಲವಾಗಿ ಹೊಡೆಯುತ್ತಾನೆ. ಆ ಕ್ಷಣವೇ ಅವಳು ಮನೆ ಬಿಟ್ಟು ಹೊರಟು ಸಿಟ್ಟಿನ ಆವೇಶದಲ್ಲಿ ಊರಿನ ಪಕ್ಕದಲ್ಲಿ ತುಂಬಿ ಹರಿಯುತ್ತದ್ದ ಹಿರಣ್ಯಕೇಶಿ ನದಿಗೆ ಧುಮುಕುತ್ತಾಳೆ. ಸುದೈವದಿಂದ ಮುಳುಗದೇ ನದಿಯಲ್ಲಿ ಹರಿಯುತ್ತಿರುವ ತಪದ ಮೇಲೆ ತೇಲುತ್ತ ಬಡಕುಂದ್ರಿ ಗ್ರಾಮದ ನಿಮ್ನ ಜಾತಿಯ ವ್ಯಕ್ತಿಯೊಬ್ಬ ಉರುವಲು ಕಡಿಯಲು ನದಿತಟದ ಅಡವಿಗೆ ಹೋಗುತ್ತಿದ್ದ ಒಂದು ಅವನಿಗೆ ನದಿ ತಟದಲ್ಲಿ ನರಳುವ ಧ್ವನಿಯೊಂದು ಕೇಳಿಸುತ್ತಿದೆ. ಆಗ ಅವನು ಸಮೀಪಕ್ಕೆ ಹೋಗಿ ನೋಡಲಾಗಿ ನೀರಿನಲ್ಲಿ ಮುಳುಗುವ ಸ್ಥಿತಿಯಲ್ಲಿದ್ದ ಹೆಣ್ಣು ಮಗು ಕಾಣಿಸುತ್ತದೆ, ಅವನು ಅವಳನ್ನು ತಪದ ಸ್ಥಳದಿಂದ ಆಚೆ ತಂದು ಸ್ವಲ್ಪ ಬೆಂಕಿಯನ್ನು ಮಾಡಿ ಅವಳಿಗೆ ಶಾಖ ಕೊಡುತ್ತಾನೆ. ಆಗ ಅವಳು ಕ್ಷಣ ಮಾತ್ರದಲ್ಲೇ ಅಲ್ಲಿ ಅಗೋಚರವಾಗುತ್ತಾಳೆ. ಇದನ್ನು ಕಂಡು ಹೆದರಿದ ಆ ಮನುಷ್ಯ ಇದು ದೇವ್ವ ಇರಬಹುದೆಂದು ಭಾವಿಸಿ ಓಡೋಡಿ ಮನೆ ಸೇರುತಾನೆ. ಆದರೆ ಆ ದಿನ ಅವಳು ಅವನ ಕನಸಿನಲ್ಲಿ ಬಂದು " ಮಗನೇ ನಾನು ದೆವ್ವವು ಅಲ್ಲ ಭೂತವು ಅಲ್ಲ ನಾನು ಎಲ್ಲಿಯೂ ಹೋಗಿಲ್ಲ, ನಾನು ಈ ಸ್ಥಳದಲ್ಲಿಯೇ ಐಕ್ಯಗೊಂಡಿರುವೇನು. (ರವೀಂದ್ರ ನಾಶಿಪುಡಿ) ನನನ್ನು ಇಲ್ಲಯೇ ಪೂಜಿಸು, ನಾನು ಸಂಕಷ್ಟದಲ್ಲಿರುವ ಭಕ್ತಾಧಿಗಳ ಸಹಾಯಕ್ಕೆ ಸದಾ ಸಿದ್ದಳಾಗಿ ಇಲ್ಲಿಯೇ ನೆಲೆಯೂರುತ್ತೇನೆ ಎಂದು ಹೇಳಿ ಅವನ ಕನಸಿನಿಂದ ಜಾರಿಹೋಗುತ್ತಾಳೆ.ಅಂದಿನಿಂದ ಆತನು ಆ ದೇವತೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಬನ್ನಿಮರದ ಕೆಳಗೆ ಸಣ್ಣ ದೇವಸ್ಥಾನ ಕಟ್ಟುತ್ತಾನೆ. ಹೀಗೆ ಹೋಳೆಯಲ್ಲಿಯೇ ಹರಿದು ಬಂದು ಹೊಳೆಯ ದಡದಲ್ಲಿ ನೆಲೆಸಿರುವುದರಿಂದ ದೇವಿಯನ್ನು ಹೊಳಮ್ಮಾದೇವಿ ಎಂದು ಜನಪದರು ಕರೆಯುತ್ತಾ ಬಂದಿದ್ದಾರೆ.

ಹೊಳೆಮ್ಮಾದೇವಿಯ ಮಹಿಮೆ ಮತ್ತು ವೈಶಿಷ್ಯತೆಗಳು

೧ ಹೊಳೆಮ್ಮಾದೇವಿಗೆ ಕವಲು ಹಚ್ಚುವುದು.

ಹೊಳಮ್ಮದೇವಿಯ ಪ್ರಮುಖವಾದ ವೈಶಿಷ್ಯವೆಂದರೆ ದೇವಿಗೆ ಕವಲು ಹಚ್ಚುವುದು. ಅಂದರೆ ಈ ಭಾಗದ ದೇವಿಯ ಭಕ್ತರು ಯಾವುದೇ ಒಂದು ನೂತನ ಕಾರ್ಯ ಮಾಡಬೇಕೆಂದರೆ ಮತ್ತು ಯಾವುದೇ ಕಾರ್ಯ ಸಿದ್ದಿಯಾಗಬೇಕಾದರೆ ಅಂದರೆ ಮದುವೆ, ನೌಕರಿ,ಭೂಮಿ ವಾಹನ, ಯಂತ್ರೋಪಕರಣಗಳ ಖರೀದಿ ಹೀಗೆ ಯಾವುದೇ ಒಂದು ಮಹತ್ವದ ಕಾರ್ಯವನ್ನು ಮಾಡಲು ಬಯಸಿದರೆ ಭಕ್ತಾಧಿಗಳು ಇಲ್ಲಿಗೆ ಬಂದು ದೇವಿಯ ದರ್ಶನ ಪಡೆದು ಅವಳಿಗೆ ಕವಲು ಹಚ್ಚುವ ಮೂಲಕ ಆ ಕಾರ್ಯಕ್ಕೆ ಒಪ್ಪಿಗೆಯನ್ನು ಕೇಳುತ್ತಾರೆ. ದೇವಿಯು ಕವಲು ಕೊಟ್ಟರೆ ಆ ಕಾರ್ಯಕ್ಕೆ ಸಿದ್ದಿಯಾಗುತ್ತದೆ "ದೇವಿಯು ಕವಲು ಕೊಟ್ಟಳು" ಎಂಬುದು ಈ ಭಾಗದ ಜನಪದ ಶಬ್ದ ಅದರ ನಿಜವಾದ ಅರ್ಥ ಭವಿಷ್ಯತ್ತಿನಲ್ಲಿ ಮುಂದು ಬರಲು ಅಥವಾ ಬೆಳೆಯಲು ಅವರು ಕೈಗೊಳ್ಳುವ ಕಾರ್ಯಕ್ಕೆ ತಾಯಿಯ ಅನುಗ್ರಹ ಪಡೆಯುವ ವಿಧಾನ. ಇತ್ತೀಚೀನ ದಿನಗಳಲ್ಲಿ ರಾಜಕಾರಣಿಗಳು ಕೂಡಾ ಚುನಾವಣೆಗೆ ಸ್ಪರ್ಧಿಸುವ ಸಮಯದಲ್ಲಿ ದೇವಿಗೆ ಕವಲು ಹಚ್ಚುವ ಮೂಲಕ ತಾಯಿಯ ಒಪ್ಪಿಗೆ ಪಡೆದು ಚುಣಾವಣೆಗೆ ಸ್ಪರ್ಧಿಸಿ ಜಯಶಾಲಿಗಳಾಗಿರುವ ಉದಾಹರಣೆಗಳು ಉಂಟು.

**೨ ಹೊಳೆಮ್ಮಾದೇವಿಯ ಬನ್ನಿಯ ಮರ**

ದೇವಿಯ ಗರ್ಭಗುಡಿಯ ಹಿಂಬದಿಯಲ್ಲಿ ಸುಮಾರು ನಾಲ್ಕನೂರಕ್ಕೂ ಹೆಚ್ಚು ವರ್ಷಗಳ ಹಳೆಯದಾದ ಒಂದು ಬನ್ನಿಯ ಮರವಿದ್ದು ಆ ಮರವು ಈ ಭಾಗದಲ್ಲಿ ತನ್ನದೇಯಾದ ವೈಶಿಷ್ಯತೆಗೆ ಪ್ರಸಿದ್ಧಿಯಾಗಿದೆ. ಈ ಮರವನ್ನು ಕಲ್ಪವೃಕ್ಷ, ಕಾಮಧೇನುವೆಂತಲೂ

ಈ ಭಾಗದ ಹೆಂಗಳೆಯರು ಕರೆಯುತ್ತಾರೆ. ಏಕೆಂದರೆ ಇದು ಸಂತಾನ ಪ್ರಾಪ್ತಿಯನ್ನು ನೀಡುವ ಒಂದು ಪವಾಡ ಸದೃಶ್ಯ ಮರವಾಗಿದೆ. ಸಂತಾನ ಪ್ರಾಪ್ತಿಯಾಗದೇ ಇರುವ ಸ್ತ್ರೀಯರು ಪ್ರಾಪ್ತಿಗಾಗಿ ದೇವಿಯಲ್ಲಿ ಹರಕೆ ಹೋತ್ತು ತೊಟ್ಟಿಲುಗಳನ್ನು ಬನ್ನಿಯ ಮರಕ್ಕೆ ಕಟ್ಟುವುದು ಇಲ್ಲಿ ವಾಡಿಕೆಯಾಗಿದೆ. ಹೀಗೆ ದೇವಿಯಲ್ಲಿ ಹರಕೆ ಹೊತ್ತು ತೊಟ್ಟಿಲು ಕಟ್ಟಿ ಸಂತಾನ ಪ್ರಾಪ್ತಿಯನ್ನು ಪಡೆದ ಅಸಂಖ್ಯಾತ ಭಕ್ತರ ಅನೇಕ ಉದಾಹರಣೆಗಳು ಇಲ್ಲಿ ಕಾಣ ಬರುತ್ತವೆ.

**೩. ದೇವಿಯ ಹೆಸರಿನಲ್ಲಿ ಸಾಕು ಪ್ರಾಣಿಗಳನ್ನು ಬಿಡುವುದು.**

ಈಕೆ ಶಾಂತಿ ಸ್ವರೂಪಿಣಿ. ಬಸವಣ್ಣರು ಹೇಳಿದಂತೆ “ ದಯವೇ ಧರ್ಮದ ಮೂಲವಯ್ಯಾ” ಎನ್ನುವಂತೆ ಈಕೆ ಪ್ರಾಣಿಗಳ ಬಗ್ಗೆ ಹೊಂದಿರುವ ದಯೆ, ಕರುಣೆ, ಮಮತೆ ಮೆಚ್ಚುವಂತಹದ್ದು ಏಕೆಂದರೆ ಸುತ್ತಮುತ್ತಲಿನ ಭಕ್ತಾಧಿಗಳು ತಮ್ಮ ದನಕರುಗಳ ಆರೋಗ್ಯದಲ್ಲಿ ಏನಾದರೂ ತೊಂದರೆ ಉಂಟಾದರೆ ಈ ದೇವಿಗೆ ಬೇಡಿಕೊಂಡು ಅದರಿಂದ ಪರಿಹಾರ ದೊರೆತರೆ ಅವರು ತಮ್ಮ ಮನೆಯಲ್ಲಿರುವ ಒಂದು ದನ, ಹಸು ಅಥವಾ ಮೇಕೆಯನ್ನು ದೇವಿಯ ಹೆಸರಿನಲ್ಲಿ ಬಿಟ್ಟು ದೇವಸ್ಥಾನಕ್ಕೆ ನೀಡುತ್ತಾರೆ. ಅಂತಹ ದೇವಿಯ ಹೆಸರಿನಲ್ಲಿ ಬಿಟ್ಟ ದನಕರುಗಳನ್ನು ದೇವಾಲಯ ಕಮೀಟಿಯವರು ಗೋಶಾಲೆಯಲ್ಲಿ ಇಟ್ಟು ಸಲಹುತ್ತಾರೆ. ಅವುಗಳಿಂದ ಬಂದ ಆದಾಯವನ್ನು ದೇವಸ್ಥಾನದ ಅಭಿವೃದ್ದಿಗೆ ವಿನಿಯೋಗಿಸುತ್ತಾರೆ. ಹೀಗೆ ದೇವಸ್ಥಾನದ ಅಭಿವೃದ್ದಿಯಲ್ಲಿ ಅಲ್ಲಿಯ ಪ್ರಾಣಿಗಳ ಪಾತ್ರವೂ ಇರುವುದರಿಂದ ಈ ದೇವಿಗೆ ಪ್ರಾಣಿಗಳ ಕುರಿತು ವಿಶೇಷ ದಯೆ ಮತ್ತು ಪ್ರೀತಿ ಇದೆ.

**೪ ಉಪ್ಪಿನ ಸ್ನಾನದಿಂದ ಚರ್ಮರೋಗ ನಿವಾರಣೆಯಾಗುವುದು.**

ಈ ದೇವಿಯ ಮತ್ತೊಂದು ವಿಶೇಷತೆ ಎಂದರೆ ಚರ್ಮರೋಗದಿಂದ ಬಳಲುವವರು ಇಲ್ಲಿಗೆ ಬಂದು ದೇವಿಯ ದರ್ಶನ ಪಡೆದು ಅಲ್ಲಿ ಅಂಗಡಿ ಮಳಿಗೆಗಳಲ್ಲಿ ಸಿಗುವ ಉಪ್ಪನ್ನು ತೆಗೆದುಕೊಂಡು ನದಿಯಲ್ಲಿ ಸ್ನಾನ ಮಾಡಿ ಆ ಉಪ್ಪನ್ನು ಮೈ ತುಂಬ ಬಳಿದುಕೊಂಡು ಮತ್ತೊಮ್ಮೆ ಸ್ನಾನ ಮಾಡುವುದರಿಂದ ಚರ್ಮರೋಗಗಳಿಗೆ ಪರಿಹಾರ ಸಿಗುತ್ತದೆ ಎನ್ನುವ ನಂಬಿಕೆ ಇಲ್ಲಿಯ ಜನರಲ್ಲಿದೆ. ಇದರಿಂದ ಪರಿಹಾರಕೊಂಡು ಅನೇಕ ಉದಾಹರಣೆಗಳು ಇವೆ. ಇವತ್ತಿನ ಅಧುನಿಕ ಮತ್ತು ವೈಜ್ಞಾನಿಕ ಯುಗದಲ್ಲಿ ಇವುಗಳು ಮೂಢನಂಬಿಕೆ ಎನಿಸಿದರೂ ಇವತ್ತಿಗೂ ಭಕ್ತರಲ್ಲಿ ಅವುಗಳ ಕುರಿತು ಅಪಾರವಾದ ನಂಬಿಕೆಯಿದೆ ಮತ್ತು ಈ ಆಚರಣೆಗಳು ಇಂದಿಗೂ ಹಾಗೆಯೇ ಮುಂದುವರೆದಿವೆ. ಇಂದು ಈ ಆಚರಣೆಗಳು ಅಪ್ರಸ್ತೂತ, ಅವೈಜ್ಞಾನಿಕವೆನಿಸಿದರೂ ಇವು ಈ ದೇವಿಯ ಭಕ್ತರ ಮನದಾಳಲ್ಲಿ ಅಷ್ಟೇ ಪ್ರಸ್ತೂತವಾಗಿವೆ.

**ಹೋಳೆಮ್ಮಾದೇವಿಯ ಜಾತ್ರಾ ವಿಶೇಷತೆ.**

ಬೆಳಗಾವಿ ಜಿಲ್ಲೆಯಲ್ಲಿ ಹುಕ್ಕೇರಿ ತಾಲೂಕಿನ ಬಡಕುಂದ್ರೀಯ ಜಾತ್ರೆಗೆ ಒಂದು ವಿಶೇಷತೆ ಇದೆ. ಏಕೆಂದರೆ ಒಂದು ವರ್ಷದಲ್ಲಿ ಸುಮಾರು ೨ ಬಾರಿ ಅಂದರೆ ಪ್ರತಿವರ್ಷ ಭಾರತ ಹುಣ್ಣಿಮೆಯ ದಿನದಿಂದ ೫ ದಿನಗಳವರೆಗೆ ಹಾಗೂ ದಸರಾ ಸಂದರ್ಭದಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ೫ ವಾರಗಳವರೆಗೆ ಜಾತ್ರೆ ಇಲ್ಲಿ ಅತಿ ವಿಜೃಂಭನೆಯಿಂದ ಜರಗುತ್ತದೆ. ಈ ಜಾತ್ರೆಯಲ್ಲಿ ಬೆಳಗಾವಿ, ಬಿಜಾಪೂರ, ಬಾಗಲಕೋಟ ಜಿಲ್ಲೆಗಳ ಹಾಗೂ ದಕ್ಷಿಣ ಮಹಾರಾಷ್ಟ್ರದ ಕೊಲ್ಲಾಪೂರ, ಸಾಂಗಲಿ, ರತ್ನಾಗಿರಿ ಸಾತಾರಾ ಜಿಲ್ಲೆಗಳ ಸಾವಿರಾರು ಭಕ್ತರು ಜಾತ್ರೆಯಲ್ಲಿ ಅತಿ ಸಂಭ್ರಮದಿಂದ ಪಾಲ್ಗೊಳ್ಳುತ್ತಾರೆ. ಜಾತ್ರೆಯ ದಿನದಂದು ದೇವಿಗೆ ವಿಶೇಷ ಅಭಿಷೇಕ ಮಾಡಿ ದೇವಿಗೆ ಮಹಾಪೂಜೆಯನ್ನು ನೆರವೇರಿಸಲಾಗಿತ್ತದೆ. ತದನಂತರ ದೇವಿಗೆ ಉಡಿತುಂಬುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಮುಂಜಾನೆಯಿಂದ ರಾತ್ರಿಯವರೆಗೆ ಮುತ್ತೈದೆ ಸುಮಂಗಲಿಯರು ಉಡಿತುಂಬುವ ಕಾರ್ಯಕ್ರಮದಲ್ಲಿ ಪಾಲ್ಗೋಳ್ಳುತ್ತಾರೆ. ಬೇರೆ ಬೇರೆ ಊರುಗಳಿಂದ ಆಗಮಿಸಿರುವ ಭಕ್ತಾಧಿಗಳು ಸರದಿಯಲ್ಲಿ ನಿಂತು ದೇವಿಯ ಉಡಿತುಂಬಿ ಅವಳ ಕೃಪೆಗೆ ಪಾತ್ರರಾಗುತ್ತಾರೆ. ಈ ದೇವಿಯ ಮತ್ತೊಂದು ವಿಶೇಷತೆ ಎಂದರೆ ದೇವಿಯ ಗುಡಿಯ ಹೆಬ್ಬಾಗಿಲಿನಿಂದ ಹಿಡಿದು ಗರ್ಭಗುಡಿಯವರೆಗೆ ಹೂ ಭಂಡಾರ ಹಾರಿಸುತ್ತಾರೆ. ಹೀಗೆ ಹೂ ಭಂಡಾರ ಹಾರಿಸುವಾಗ ಆ ಹೂ ಭಂಡಾರವು ಮೈ ಮೇಲೆ ಬಿದ್ದರೆ ಜನರ ಪಾಪ ತೊಳೆಯುತ್ತದೆ. ಎಂಬ ನಂಬಿಕೆ ಜನರಲ್ಲಿ ಬೇರೂರಿದೆ. ಈ ಜಾತ್ರೆಯಲ್ಲಿ ದೇವಿಯ ಪಲ್ಲಕ್ಕಿ ಉತ್ಸವ ಕೂಡ ಜರುಗುತ್ತವೆ. ಈ ಪಲ್ಲಕ್ಕಿ ಉತ್ಸವದಲ್ಲಿ ಸಾವಿರಾರು ಭಕ್ತಾಧಿಗಳು ಪಾಲ್ಗೊಂಡು ಜಯಕಾರ ಹಾಕುತ್ತಾ ಸಕಲ ವಾದ್ಯಗಳೊಂದಿಗೆ ದೇವಿಯ ಮೂರ್ತಿಯನ್ನು ಊರು ತುಂಬಾ ಮೆರವಣಿಗೆ ಮಾಡಿ ಪಲ್ಲಕ್ಕಿ ಉತ್ಸವವು ದೇವಿಸ್ಥಾನಕ್ಕೆ ಬಂದು ಕೊನೆಗೊಳ್ಳುದೆ.

ಸಾಮಾನ್ಯವಾಗಿ ಎಲ್ಲ ಜಾತ್ರೆಗಳಲ್ಲಿರುವಂತೆ ಮಹಾಪ್ರಸಾದವು ಈ ಜಾತ್ರೆಯಲ್ಲಿ ಇರುವುದಿಲ್ಲ. ಭಕ್ತಾಧಿಗಳು ದೇವಿಯ ನೈವದ್ಯಗೆಂದು ಬುತ್ತಿಯನ್ನು ಕಟ್ಟಿಕೊಂಡು ಸಕಲ ಪರಿವಾರ ಸಮೇತ ಇಲ್ಲಿ ಆಗಮಿಸಿ ದೇವರಿಗೆ ಹೋಳಿಗೆ, ಖಡಬು ನೈವದ್ಯ ಮಾಡಿ ತದನಂತರ ನದಿಯ ದಂಡೆಯ ಮೇಲೆ ಮತ್ತು ಸುತ್ತಮುತ್ತಲಿನ ಹೊಲಗದ್ದೆಗಳಲ್ಲಿ ಪರಿವಾರ ಸಮೇತ ಗುಂಪು ಗುಂಪಾಗಿ ಕುಳಿತುಕೊಂಡು ಸಹಭೋಜನ ಮಾಡುತ್ತಾರೆ. ಮುಖ್ಯವಾಗಿ ರೈತಾಪಿ ಜನರು ತಮ್ಮ ಕುಟುಂಬದೊಂದಿಗೆ ಆಗಮಿಸಿ ಅತಿ ಹುರುಪಿನಿಂದ ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಅಂದರೆ ವರ್ಷವಿಡಿ ದುಡಿದ ರೈತರು ತಮ್ಮ ಬೇಸರವನ್ನು ಸ್ವಲ್ಪಮಟ್ಟಿಗಾದರೂ ಕಳೆದುಕೊಳ್ಳಲು ಇಂತಹ ಜಾತ್ರೆಗಳಲ್ಲಿ ಪಾಲ್ಗೊಂಡು ತಮ್ಮ ಕುಟುಂಬದೊಂದಿಗೆ ನಗುನಗುತ್ತ ಜಾತ್ರೆಯ ಪ್ರತಿಯೊಂದು ಕಾರ್ಯಕ್ರಮವನ್ನು ವೀಕ್ಷಿಸುತ್ತ ಅತಿ ಸಂತೋಷದಿಂದ ಎರಡುದಿನ ಕಾಲಕಳೆದು ಹಿಂದಿರುಗುತ್ತಾರೆ. ಆದರೆ ಈ ದೇವಿಯ ಜಾತ್ರೆಯಲ್ಲಿ ಮಹಾಪ್ರಸಾದ ನಡೆಯದಿದ್ದರೂ ಪ್ರತಿತಿಂಗಳು ಅಮವಾಸ್ಯೆಯಂದು ಭಕ್ತರಿಗಾಗಿ ಇಲ್ಲಿ ಅನ್ನದಾಸೋಹ ಏರ್ಪಡಿಸಲಾಗುತ್ತದೆ.

ಈ ಜಾತ್ರೆಯ ಪ್ರಮುಖವಾದ ವಿಶೇಷತೆ ಎಂದರೆ ಈ ಜಾತ್ರೆಯಲ್ಲಿ ಯಾವುದೇ ಧರ್ಮ ಜಾತಿಯನ್ನದೇ ಎಲ್ಲರು ಪಾಲ್ಗೋಳ್ಳುತ್ತಾರೆ ಈಕೆಯೂ ಸರ್ವಧರ್ಮಿಯರ ಆರಾಧ್ಯ ದೇವತೆ, ಸಾಮಾನ್ಯವಾಗಿ ಎಲ್ಲ ಗ್ರಾಮಗಳ ಲಕ್ಷ್ಮೀದೇವಿ ಜಾತ್ರೆಗಳಲ್ಲಿ ಪ್ರಾಣಿ ಬಲಿಯಿರುವಂತೆ ಈ ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷಿದ್ಧ. ಈ ಜಾತ್ರೆಯಲ್ಲಿ ಯಾವುದೇ ಪ್ರಾಣಿಗಳ ಮಾರಣಹೋಮ ನಡೆಯುವುದಿಲ್ಲ.

**ಹೋಳೆಮ್ಮಾ ದೇವಾಲಯದ ನಿರ್ಮಾಣ ಮತ್ತು ವಾಸ್ತುಶಿಲ್ಪ**

ಹಿರಣ್ಯಕೇಶಿ ನದಿಯ ತಟದಲ್ಲಿ ನೆಲೆಸಿರುವ ಈ ಲಕ್ಷ್ಮೀದೇವಿ ಮೂರ್ತಿಗೆ ಆಲಯ ನಿರ್ಮಿಸಿದವರು ವಂಟಮೂರಿ ಸಂಸ್ಥಾನದ ದೇಸಾಯಿಯವರು. ಇವರು ನಾಲ್ಕನೂರು ವರ್ಷಗಳ ಹಿಂದೆ ಗರ್ಭಗುಡಿ ಪ್ರಾಂಗಣ ನಿರ್ಮಿಸಿ ದೇವಿಯನ್ನು ತಮ್ಮ ಕುಲದೇವತೆಯಾಗಿ ಸ್ವಿಕರಿಸಿದರು. ಇದೇ ಮನೆತನದ ಬಸವ ಪ್ರಭು ದೇಸಾಯಿಯವರು ಗುಡಿಯ ಮುಂದೆ ಅಷ್ಟಕೋನಾಕೃತಿಯ ದ್ವೀಪಸ್ತಂಭವನ್ನು ನಿರ್ಮಿಸಿದರು. ನಾಲ್ಕು ಗಜಗಳ ಬೆನ್ನ ಮೇಲೆ ಎತ್ತರವಾಗಿ ನಿಂತಿರುವ ದ್ವೀಪಸ್ತಂಭ ಹಾಗೂ ದ್ರಾವಿಡ ಶೈಲಿಯಲ್ಲಿರುವ ದೇವಸ್ಥಾನದ ಶಿಲ್ಪಕಲೆ ಸುಂದರವೂ, ಆಕರ್ಷಣೀಯವೂ ಆಗಿದೆ. (ಡಾ। ಎಸ್. ಪಿ. ಸುರೇಬಾನಕರ) ಬಸವ ಪ್ರಭು ದೇಸಾಯಿಯರ ಮಗ ಪ್ರಭುದೇವ

ದೇಸಾಯಿಯವರು ಸುಮಾರು ೧೫೦ ವರ್ಷಗಳ ಹಿಂದೆ ಹಿರಣ್ಯಕೇಶಿ ನದಿಗೆ ಕಲ್ಲಿನ ಸೇತುವೆ ನಿರ್ಮಿಸಿದರು ಎಂದು ತಿಳಿಯಲಾಗಿದೆ. ಈ ದೇವಾಲಯಕ್ಕೆ ಕೊಲ್ಲಾಪುರದ ಮಹಾರಾಜರು ಮತ್ತು ವಂಟಮೂರಿ ದೇಸಾಯಿಯವರು ಈ ದೇವಿಯ ನಿತ್ಯಪೂಜೆ ಮಾಡಲು ಬಸರಗಿಯ ಹಾಳೂರಿ ಪೂಜೇರಿ ಮನೆತನದ ಪೂಜಾರಿಯನ್ನು ನೇಮಕ ಮಾಡಿದರು. ಮತ್ತು ಆ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಆ ಊರಿನ ಇರಗಾರ ಸಮಾಜದ ವ್ಯಕ್ತಿಗೆ ದೇವತೆಯ ನಿತ್ಯದ ಪೂಜೆಗೆ ನೀರು ಕಾಯಿಸುವ ಪೂಜಾ ಸಮಯದಲ್ಲಿ ಡೊಳ್ಳು ಬಾರಿಸುವ, ದೇವಸ್ಥಾನದ ಪವಳಿಯನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ನೇಮಿಸಿದರು. ಅವರಿಗೆ ವಂಟಮೂರಿ ದೇಸಾಯಿಯವರು ತಮ್ಮ ಒಡೆತನ ಭೂಮಿಯನ್ನು ಇಂಬಳಿಯಾಗಿ ನೀಡಿ ಸಹಕರಿಸಿದರು ಎಂದು ತಿಳಿಯಲಾಗಿದೆ.

ಈ ದೇವಸ್ಥಾನದ ಮತ್ತೊಂದು ವೈಶಿಷ್ಟ್ಯವೆಂದರೆ ಈ ದೇವಸ್ಥಾನದ ಗರ್ಭಗುಡಿಗೆ ಬಾಗಿಲು ಇಲ್ಲವೇ ಇಲ್ಲ. ಅಂದರೆ ಮಧ್ಯ ರಾತ್ರಿಯೂ ಕೂಡ ಸರಾಗವಾಗಿ ದೇವಿಯ ದರ್ಶನ ಮಾಡಬಹುದು. ಗರ್ಭಗುಡಿಗೆ ಬಾಗಿಲು ಇಲ್ಲದಿರುವ ದೇವಸ್ಥಾನ ದಕ್ಷಿಣ ಭಾರತದಲ್ಲಿಯೇ ಇದೊಂದೆ ಎಂದು ಹೇಳಲಾಗುತ್ತದೆ. ಕೂಡ ಇದುವರೆಗೆ ದೇವಿಯ ವಸ್ತ್ರಾಭರಣಗಳಾಗಲಿ, ಒಡವೆಗಳಾಗಲಿ, ವಸ್ತುಗಳಾಗಲಿ ಕಳುವು ಆಗಿರುವ ಪ್ರಕರಣಗಳು ದಾಖಲಾಗಿಲ್ಲ ಎಂಬುದು ತಿಳಿದುಬಂದಿದೆ ಏಕೆಂದರೆ ದೇವಿಯ ಯಾವುದೇ ವಸ್ತುವನ್ನು ಕಳುವು ಮಾಡಿದರೆ ಅಂತಹವರ ಕಣ್ಣುಗಳು ಹೋಗುತ್ತವೆ ಎಂಬ ಭಯ ಜನರಲ್ಲಿ ಇದೆ.

**ಗ್ರಂಥಸೂಚಿ**


1. ದೇ ಜವರೇಗೌಡ: “ಜನಪದ ಅಧ್ಯಯನ” ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ೧೯೭೬. ಸಂ–೩೩೮
2. ಡಾ। ಹಂಪನಾಗರಾಜಯ್ಯ: “ಕರ್ನಾಟಕ ಜಾತ್ರೆಗಳು” ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೮೫
3. ರವೀಂದ್ರ. ಸಾ. ನಾಶಿಪುಡಿ: “ಶ್ರೀ ಹೊಳೆಮ್ಮದೇವಿ ಜಾತ್ರೆ” ಸ್ನೇಹಿತ ಪ್ರಕಾಶನ ಬಡಕುಂದ್ರಿ. ೨೦೧೩
4. ಡಾ। ಕರೆಗೌಡ ಬೀಚನಹಳ್ಳಿ: “ಜಾತ್ರೆಗಳು” ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೮೦
5. ಪ್ರಕಾಶ ದೇಶಪಾಂಡೆ : ಲಕ್ಷ್ಮೀದೇವಿ ಹೊಳೆಮ್ಮದೇವಸ್ಥಾನ ಲೇಖನ ಘಟಪ್ರಭೆ ಸಿರಿ ೨೦೧೧
6. ಹೆಚ್. ಜೆ. ಲಕ್ಕಪ್ಪಗೌಡ: “ಕರ್ನಾಟಕ ಜಾತ್ರೆಗಳು” ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ೧೯೯೮
7. ಪ್ರೊ. ಎಲ್ ವಿ. ಪಾಟೀಲ: ಮತ್ತು ಡಾ} ಗುರುಪಾದ ಮರಿಗುದ್ದಿ: ಘಟಪ್ರಭೆ ಸಿರಿ (ಸ್ಮರಣ ಸಂಚಿಕೆ) ಹುಕ್ಕೇರಿ ತಾಲೂಕಾ ೨ನೇಯ ಕ ಸಾ ಸಮ್ಮೇಳನ ಎಪ್ರೀಲ ೨೦೧೧
8. ಡಾ। ಎಸ್ ಪಿ ಸುರೇಬಾನಕರ : ಬೆಳಗಾವಿ ಜಿಲ್ಲೆಯ ಪ್ರಾಚೀನ ದೇವಾಲಯಗಳು